ದಿನಾಂಕ : 19-03-2024 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ**

5. ಆ ದಿನ ಆರೋಪಿತರು ಬಿಸಾಕಿ ಹೋದಂತಹ ವಸ್ತುಗಳನ್ನು ಗುರುತಿಸಬಲ್ಲೆ. ನ್ಯಾಯಾಲಯದ ಮುಂದೆ ಬ್ರೌನ ಪೇಪರನಿಂದ ಪ್ಯಾಕ ಮಾಡಿ ಸೀಲು ಮಾಡಿದ 5 ವಸ್ತುಗಳಿದ್ದು, ಅವುಗಳ ಸೀಲು ಮತ್ತು ಪ್ಯಾಕ ತೆಗೆದು ಸಾಕ್ಷಿಗೆ ತೋರಿಸಿ, ಗುರುತಿಸಲು ಮಾನ್ಯ ವಿಶೇಷ ಸರ್ಕಾರಿ ಅಭಿಯೋಕರು ಕೋರಿದ್ದು, ಅನುಮತಿ ನೀಡಲಾಯಿತು. ಮಾನ್ಯ ಸರ್ಕಾರಿ ಅಭಿಯೋಜಕರ, ಆರೋಪಿತರ ಹಾಗೂ ಆರೋಪಿತರ ವಕೀಲರ ಸಮಕ್ಷಮದಲ್ಲಿ ತೆರೆದ ನ್ಯಾಯಾಲಯದಲ್ಲಿ 5 ವಸ್ತುಗಳ ಪ್ಯಾಕ್ ಮತ್ತು ಸೀಲನ್ನು ತೆಗೆದು ಸಾಕ್ಷಿಗೆ ತೋರಿಸಲಾಗಿ, ಅದರಲ್ಲಿ ಬಂಬು ಬಡಿಗೆ ಎರಡು ಕಬ್ಬಿಣದ ರಾಡ್ ಚಡಿಗಳು ಹಾಗೂ ಹಿಡಿಗಾತ್ರದ ಕಲ್ಲುಗಳಿದ್ದು, ಅದೇ ವಸ್ತುಗಳಿಂದ ಆರೊಪಿತರು ಹಲ್ಲೆ ಮಾಡಿರುತ್ತಾರೆ ಎಂದು ಸಾಕ್ಷಿಯು ನೋಡಿ ಗುರುತಿಸಿದ ಕಾರಣ ಬಂಬು ಬಡಿಗೆಯನ್ನು ಎಮ್.ಓ .1 ಎಂದು, ಎರಡು ಕಬ್ಬಿಣದ ಚಡಿಗಳನ್ನು ಎಮ್.ಓ .2 ಮತ್ತು ಎಮ್.ಓ .3 ಎಂದು ಒಟ್ಟು 12 ಕಲ್ಲುಗಳಿದ್ದು, ಅವುಗಳನ್ನು ಒಟ್ಟಾಗಿ ಎಮ್.ಓ .4 ಎಂದು ಗುರುತಿಸಲಾಯಿತು.

6. ದಿಃ 28.06.2017 ರಂದು ನಾವು ನಾರಗೊಂಡ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾಗ ಹಾರೂಗೇರಿ ಪೋಲಿಸರು ಅಲ್ಲಿಗೆ ಬಂದಿದ್ದು, ರಕ್ತಕಲೆಯಾದಂತಹ ಬಟ್ಟೆಗಳು ಅಮಾನತ್ತುಪಡಿಸಿಕೊಳ್ಳಬೇಕೆಂದು ಹೇಳಿ ನನ್ನ, ಶ್ರೀಕಾಂತ ಅರಿಹಂತ ಪೊನ್ನಂಜಿರವರ ರಕ್ತಕಲೆಯಾದ ಶರ್ಟನ್ನು ಪಂಚರ ಸಮಕ್ಷಮ ಆಸ್ಪತ್ರೆಯಲ್ಲಿಯೇ ಪಂಚನಾಮೆ ಮಾಡಿ ಶರ್ಟನ್ನು ಮುಂದಿನ ಕ್ರಮಕ್ಕಾಗಿ ಅಮಾನತ್ತುಪಡಿಸಿಕೊಂಡರು. ಆ ಸಂದರ್ಭದಲ್ಲಿ ಪೋಟೋವನ್ನು ಸಹ ತೆಗೆದಿರುತ್ತಾರೆ. ಸಾಕ್ಷಿಗೆ ನ್ಯಾಯಾಲಯದ ಮುಂದಿದ್ದ ಒಂದು ದಾಖಲೆಯನ್ನು ತೋರಿಸಲಾಗಿ, ಸಾಕ್ಷಿಯು ಅದರಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆಯು ರಕ್ತಹತ್ತಿದ ಬಟ್ಟೆ ಜಪ್ತಿ ಪಂಚನಾಮೆಯಾಗಿದ್ದು ಅದನ್ನು ನಿಪಿಃ 2 ಎಂದು, ಸಾಕ್ಷಿಯ ಸಹಿಯನ್ನು ನಿಪಿಃ 2 ಎ ಎಂದು ಗುರುತಿಸಲಾಯಿತು. ಸಾಕ್ಷಿಗೆ ನ್ಯಾಯಾಲಯದ ಮುಂದಿದ್ದ ಒಂದು ಪೋಟೋವನ್ನು

ತೋರಿಸಲಾಗಿ, ಅದನ್ನು ನೋಡಿ ಅದರಲ್ಲಿ ತಾನು, ಇತರೆ ಸಾಕ್ಷಿದಾರರು ಬಟ್ಟೆಗಳನ್ನು ಹಾಜರುಪಡಿಸುವ ಸಂದರ್ಭದಲ್ಲಿ ತೆಗೆದಿರುವ ಪೋಟೋ ಎಂದು ನೋಡಿ ಗುರುತಿಸಿದ್ದು, ಆದಕಾರಣ ಸದರಿ ಪೋಟೋವನ್ನು ನಿಪಿಃ 3 ಎಂದು ಗುರುತಿಸಲಾಯಿತು.

7. ಆ ದಿನ ಅಮಾನತ್ತುಪಡಿಸಿಕೊಂಡಂತಹ ರಕ್ತಕಲೆಯಾದ ಬಟ್ಟೆಗಳನ್ನು ನೋಡಿದರೆ ಗುರುತಿಸಬಲ್ಲೆ. ನ್ಯಾಯಾಲಯದ ಮುಂದೆ ಬ್ರೌನ ಪೇಪರನಿಂದ ಪ್ಯಾಕ ಮಾಡಿ ಸೀಲು ಮಾಡಿ 4 ರಕ್ತಕಲೆಯಾದ ಬಟ್ಟೆಗಳಿದ್ದು, ಅವುಗಳ ಸೀಲು ಮತ್ತು ಪ್ಯಾಕ ತೆಗೆದು ಸಾಕ್ಷಿಗೆ ತೋರಿಸಿ, ಗುರುತಿಸಲು ಮಾನ್ಯ ವಿಶೇಷ ಸರ್ಕಾರಿ ಅಭಿಯೋೀಕರು ಕೋರಿದ್ದು, ಅನುಮತಿ ನೀಡಲಾಯಿತು. ಮಾನ್ಯ ಸರ್ಕಾರಿ ಅಭಿಯೋಜಕರ, ಆರೋಪಿತರ ಹಾಗೂ ಆರೋಪಿತರ ವಕೀಲರ ಸಮಕ್ಷಮದಲ್ಲಿ ತೆರೆದ ನ್ಯಾಯಾಲಯದಲ್ಲಿ 4 ವಸ್ತುಗಳ ಪ್ಯಾಕ್ ಮತ್ತು ಸೀಲನ್ನು ತೆಗೆದು ಸಾಕ್ಷಿಗೆ ತೋರಿಸಲಾಗಿ, ಅದರಲ್ಲಿದ್ದ ತಿಳಿ ನೀಲಿ ಬಣ್ಣದ ಉದ್ದ ತೋಳಿನ ಶರ್ಟ ಅಲ್ಲಲ್ಲಿ ರಕ್ತ ಕಲೆಯಾಗಿದ್ದು, ಅದು ತನ್ನದೆಂದು ಹೇಳಿದ ಕಾರಣ ಸದರಿ ಶರ್ಟನ್ನು ಎಮ್.ಓ.5 ಎಂದು, ಜಾಂಬಳಿ ಬಣ್ಣದ ಉದ್ದ ತೋಳಿನ ಶರ್ಟ ಅಲ್ಲಲ್ಲಿ ರಕ್ತ ಕಲೆಯಾಗಿದ್ದು, ಅದು ಶ್ರೀಕಾಂತ ಮಾರ್ತಾಂಡ ಇತನದ್ದು ಎಂದು ಹೇಳಿದ ಕಾರಣ ಸದರಿ ಶರ್ಟನ್ನು ಎಮ್.ಓ.6 ಎಂದು, ಬಿಳಿ ಬಣ್ಣದ ಉದ್ದ ತೋಳಿನ ಶರ್ಟ ಅಲ್ಲಲ್ಲಿ ರಕ್ತ ಕಲೆಯಾಗಿದ್ದು, ಅದು ಅರಿಹಂತ ಮಹಾವೀರ ಇತನದ್ದು ಎಂದು ಹೇಳಿದ ಕಾರಣ ಸದರಿ ಶರ್ಟನ್ನು ಎಮ್.ಓ.7 ಎಂದು, ಬಿಳಿ ಬಣ್ಣದ ಅರ್ಧ ತೋಳಿನ ಶರ್ಟ ಅಲ್ಲಲ್ಲಿ ರಕ್ತ ಕಲೆಯಾಗಿದ್ದು, ಅದು ಪೊನ್ನಂಜಿ ಗಿರಿಯಪ್ಪ ಇತನದ್ದು ಎಂದು ಹೇಳಿದ ಕಾರಣ ಸದರಿ ಶರ್ಟನ್ನು ಎಮ್.ಓ .8 ಎಂದು ಗುರುತಿಸಲಾಯಿತು.

8. ದಿಃ 31.08.2017 ರಂದು ಪೋಲಿಸನವರು ರಾಯಬಾಗದ ನ್ಯಾಯಾಧೀಶರ ಹತ್ತಿರ ಕರೆದುಕೊಂಡು ಹೋದರು. ಅಲ್ಲಿ ನ್ಯಾಯಾಧೀಶರು ನನ್ನನ್ನು ವಿಚಾರಣೆ ಮಾಡಿದಾಗ ನ್ಯಾಯಾಧೀಶರ ಮುಂದೆ ನಾನು ಸ್ವಇಚ್ಛೆಯಿಂದ ಹೇಳಿಕೆಯನ್ನು ಘಟನೆಯ ವಿಷಯವನ್ನು ಸವಿಸ್ತಾರವಾಗಿ ಹೇಳಿರುತ್ತೇನೆ. ನ್ಯಾಯಾಲಯದ ಕಡತದಲ್ಲಿ ಬ್ರೌನ ಪೇಪರನಲ್ಲಿ ಪ್ಯಾಕ ಮಾಡಿದ ಒಂದು ದಾಖಲೆ ಇದ್ದು, ಸದರಿ ಬ್ರೌನ ಪೇಪರ ಪ್ಯಾಕನ್ನು ತೆಗೆದು ಸಾಕ್ಷಿಗೆ ತೋರಿಸಲಾಗಿ,

ಅದರಲ್ಲಿರುವ ಸಹಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಸದರಿ ದಾಖಲೆಯು ಪ್ರಧಾನ ಸಿವಿಲ್ ನ್ಯಾಯಾದೀಶರು ಮತ್ತು ಜೆ.ಎಮ್.ಎಫ್.ಸಿ. ರಾಯಬಾಗರವರು ಪಡೆದುಕೊಂಡ ಕಲಂ 164 ರ ಹೇಳಿಕೆಯಾಗಿದ್ದು, ಅದನ್ನು ನಿಪಿಃ 4 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿಃ4 ಎ ಎಂದು ಗುರುತಿಸಲಾಯಿತು.

9. ಪಿರ್ಯಾದಿಯಲ್ಲಿ ಕೆಲವೊಬ್ಬ ಆರೋಪಿತರ ಹೆಸರು ಮತ್ತು ವಿಳಾಸವನ್ನು ಹೇಳಿರಲಿಲ್ಲ, ಪೋಲಿಸರು ನನ್ನ ಮರುಹೇಳಿಕೆಯನ್ನು ಪಡೆದುಕೊಂಡಾಗ ಅವರ ಹೆಸರು ಮತ್ತು ವಿಳಾಸವನ್ನು ಹೇಳಿರುತ್ತೇನೆ.

**<u>ಪಾಟೀ ಸವಾಲು: ಆರೋಪಿತರ ಪರ ಶ್ರೀ ಹೆಚ್.ಸಿ.ಎಸ್ ಹಾಗೂ ಶ್ರೀ ಎ.ಸಿ.ಪಿ ವಕೀಲರಿಂದ</u>**

ಈ ಹಂತದಲ್ಲಿ ಆರೋಪಿತರ ಪರ ವಕೀಲರು ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿದ್ದು, ಕೋರಿಕೆಯ ಮೇರೆಗೆ ಸಮಯಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಚೆನ್ನಪ್ಪ ಗೌಡ)
3 ನೇ ಹೆಚ್ಚುವರಿ ಸತ್ರ ನ್ಯಾಯಾಧೀಶರು, ಬೆಳಗಾವಿ.